**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 8/2023**

| | | |
|---|---|---|
| **ಸಾಕ್ಷಿದಾರನ ಹೆಸರು** : ಶಿವು | | **ಪಿ.ಡಬ್ಲ್ಯೂ–** 11 |
| **ತಂದೆಯ ಹೆಸರು** : ರಾಮಕೃಷ್ಣ | | **ಸಿ.ಡಬ್ಲ್ಯೂ–** 21 |
| **ವಯಸ್ಸು** : 37 ವರ್ಷ | | |
| **ಉದ್ಯೋಗ** : ದಲ್ಲಾಳಿ ಕೆಲಸ | | |
| **ವಾಸಸ್ಥಳ** : ಬೆಲವತ್ತಾ ಗ್ರಾಮ. | | |

**ಸಾಕ್ಷಿಯನ್ನು ಈ ದಿನ ದಿಃ07.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**1.** ನಾನು ಜಮೀನಿನ ದಲ್ಲಾಳಿ ಕೆಲಸ ಮಾಡಿಕೊಂಡಿರುತ್ತೇನೆ. ಗೋಪಾಲ್ ರವರ ಪರಿಚಯ ಇರುತ್ತದೆ. ಚಾ.ಸಾಃ2 ರವರ ಪರಿಚಯ ಇರುವುದಿಲ್ಲ. ಮೃತ ಜಹೀರುದ್ದೀನ್ ನನ್ನು ನೋಡಿರುವುದಿಲ್ಲ. 1 ಮತ್ತು 5 ನೇ ಆರೋಪಿಯವರು ನಮ್ಮ ಊರಿನವರು ನಮ್ಮ ಪರಿಚಿತರು. 4 ನೇ ಆರೋಪಿ ನನ್ನ ತಮ್ಮ.

**2.** ಯಾವ ಕಾರಣಕ್ಕೆ ಆರೋಪಿತರ ಮೇಲೆ ಪ್ರಕರಣ ದಾಖಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಯಾವುದೇ ಗಲಾಟೆ ನೋಡಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

3. 1 ಮತ್ತು 5 ನೇ ಆರೋಪಿತರು ನನ್ನ ಸಂಬಂಧಿಕರು ಎಂದರೆ ಸರಿ.

4. ದಿಃ- 19.01.2020 ರಂದು ಬೆಳಿಗ್ಗೆ 11.45 ಕ್ಕೆ ನಾನು ವಿಜಿ ಬೇಕರಿ ಬಳಿ ಟೀ ಕುಡಿಯುತ್ತಿದ್ದಾಗ, ಬೆಲವತ್ತಾ ಮೇನ್ ರೋಡಿನಿಂದ ರಿಂಗ್ ರೋಡ್ ಕಡೆಗೆ ಒಂದು ಆಟೋ ಸ್ಪೀಡಾಗಿ ಹೋಗುತ್ತಿತ್ತು. ಅದರ ಹಿಂದೆ ಸ್ಕೂಟರ್ ಗಳಲ್ಲಿ ಹಿಂಬಾಲಿಸಿಕೊಂಡು ಕಳ್ಳ-ಕಳ್ಳ ಎಂದು ಕಿರುಚಿಕೊಂಡು ಹೋಗುತ್ತಿದ್ದರು. ನಮ್ಮ ಮೇಕೆಗಳನ್ನು ಕಳ್ಳತನ ಮಾಡಿರಬಹುದೆಂದು ನಾನು ಸಹ ನನ್ನಸ್ಕೂಟರಿನಲ್ಲಿ ಅವರನ್ನು ಹಿಂಬಾಲಿಸಿಕೊಂಡು ಹೋದೆ. ಆದರೆ ನನ್ನ ಸ್ಕೂಟರಿನಲ್ಲಿ ಕುಳಿತಿದ್ದವನ ಹೆಸರು ನನಗೆ ಗೊತ್ತಿಲ್ಲ. ಅವರ ಮುಖ ಪರಿಚಯ ಇರುತ್ತದೆ. ಆಟೋ ಲಕ್ಷ್ಮೀ ಹೋಟೆಲ್ ಕ್ರಾಸಿನಲ್ಲಿ ಪಲ್ಟಿ ಹೊಡೆದು ಮಗುಚಿ ಬಿತ್ತು. ಜನರೆಲ್ಲಾ ತುಂಬಿಕೊಂಡರು. ಆಟೋದ ಬಳಿ ಒಬ್ಬ ಬಿದ್ದಿದ್ದು, ಆಟೋದ ಬಳಿಯಿಂದ ಒಬ್ಬ ವ್ಯಕ್ತಿ ಮಣ್ಣಿನ ರಸ್ತೆಯಲ್ಲಿ ಜೋರಾಗಿ ನಡೆದುಕೊಂಡು ಹೋಗುತ್ತಿದ್ದ. ಸುಮಾರು ಜನರು ಸೇರಿದಂತೆ ನಾನು ಸಹ ಸ್ಕೂಟರಿನಲ್ಲಿ ಹಿಂಬಾಲಿಸಿಕೊಂಡು ಕಳ್ಳ-ಕಳ್ಳ ಎಂದು ಕೂಗಿಕೊಂಡಿದ್ದರಿಂದ ಗ್ರೌಂಡಿನಲ್ಲಿ ಕಬ್ಬಡಿ ಆಡುತ್ತಿದ್ದ ಹುಡುಗರು ಹಿಡಿದುಕೊಂಡು ವಿಚಾರಿಸಿದಾಗ, ಆತನ ಹೆಸರು ಕಾರ್ತಿಕ್ ಎಂದು ಮತ್ತು ಆಟೋದ ಬಳಿ ಇರುವವನು ಜಹೀರುದ್ದೀನ್ ಎಂದು ಮೇಕೆಯನ್ನು ಕಳ್ಳತನ ಮಾಡಿಕೊಂಡು ಹೋಗುತ್ತಿದ್ದೆವು ಎಂದು ಹೇಳಿದನು. ಪೊಲೀಸರಿಗೆ ವಿಚಾರ ತಿಳಿಸಿ, ಆತನನ್ನು ಅವರಿಗೆ ಒಪ್ಪಿಸುವ ಉದ್ದೇಶದಿಂದ ಸ್ಕೂಟರಿನ ಮದ್ಯೆದಲ್ಲಿ ಕಾರ್ತಿಕ್ ಎಂಬುವವನನ್ನು ಕೂರಿಸಿಕೊಂಡು ಅವನ ಹಿಂಭಾಗದಲ್ಲಿ ನಾನು ಕೂತು, ನದೀಮ್ ಸ್ಕೂಟರ್ ಓಡಿಸಿಕೊಂಡು 3 ಜನ ಆಟೋ ಬಿದ್ದಿದ್ದ ಸ್ಥಳಕ್ಕೆ

ಬಂದೆವು. ಹೋಟೆಲ್ ಬಳಿ ಬಂದಾಗ, ಕಾರ್ತಿಕ್ ಎಂಬುವವನಿಗೆ ಮಹೇಶ ಕೈನಿಂದ ಹೊಡೆದ, ಉಳಿದವರು ಆತನ ಮೇಲೆ ಹಲ್ಲೆ ಮಾಡುತ್ತಿದ್ದರು. ನಾನು ಎಲ್ಲರನ್ನು ತಡೆದು ಆಟೋದ ಬಳಿಯೇ ನನ್ನ ಜೊತೆ ಇರಿಸಿಕೊಂಡೆನು. ಅಂದಾಜು 12 ಗಂಟೆ ಸುಮಾರಿಗೆ ಆಟೋದ ಬಳಿ ಇದ್ದ ಅಜರುದ್ದೀನ್ ಹೊಟ್ಟೆ ಹಿಡಿದುಕೊಂಡು ಸುಸ್ತಾದಂತೆ ಆಟೋಗೆ ಹೊರಗಿಕೊಂಡನು. ಆಟೋದಲ್ಲಿ ಒಂದು ಮೇಕೆ ಇದ್ದು, ಅದು ಗೋಪಾಲದವರದಾಗಿತ್ತು. 12.45 ಕ್ಕೆ ಪೊಲೀಸರ ಬಂದರು. ಅವರಿಬ್ಬರಿಗೆ ಯಾರು ಹೊಡೆದವರು ಎಂದು ಕೇಳಿದಾಗ, ಗೋಪಾಲ್ ರವರ ಮೇಕೆಯನ್ನು ಕಳ್ಳತನ ಮಾಡುತ್ತಿದುದ್ದರಿಂದ ಊರಿನ ಜನರ ಗುಂಪು ಹಲ್ಲೆ ಮಾಡಿರುತ್ತಾರೆ ಎಂದು ಹೇಳಿದೆವು. ಯಾರ ಹೆಸರು ಸಹ ನಾವು ಹೇಳಿರುವುದಿಲ್ಲ. ನಂತರ ಜಹೀರುದ್ದೀನ್ ಮತ್ತು ಕಾರ್ತಿಕನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ನನ್ನ ದ್ವಿಚಕ್ರವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**5.** ಪೊಲೀಸರು ಲಕ್ಷ್ಮೀ ಹೋಟೆಲಿನಲ್ಲಿ ಅಳವಡಿಸಿದ ಸಿಸಿಟಿವಿ ಕ್ಯಾಮೆರಾದಲ್ಲಿನ ದೃಶ್ಯಾವಳಿಗಳನ್ನು ನನಗ ತೋರಿಸಿದಾಗ ನಾನು ಹಲ್ಲೆ ಮಾಡಿದವರನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಇದೇ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಶಾನೆ ಪಿ-16 ಎಂದು ಗುರುತಿಸಲಾಯಿತು.

**6.** ನಾನು ಪ್ರತ್ಯಕ್ಷವಾಗಿ ಘಟನೆ ನೋಡಿ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು  ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**